# RULES OF ADMISSION

ನಿಬಂಧನೆಗಳು–RULES

**ಸದಸ್ಯತ್ವಕ್ಕೆ ಅರ್ಜಿ**

ಕಾರ್ಯಕಾರಿ ಸಮಿತಿಯು ಕಾಲಕಾಲಕ್ಕೆ ನಿಗದಿ ಪಡಿಸುವ ಅರ್ಜಿ ಫಾರಂನಲ್ಲಿ ಸದಸ್ಯತ್ವದ ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ್ರತಿ ಅರ್ಜಿಯನ್ನು ಒಬ್ಬ ಸದಸ್ಯರು ಸೂಚಿಸಿ ಮತ್ತೊಬ್ಬ ಸದಸ್ಯರು ಅನುಮೋದಿಸತಕ್ಕದ್ದು ಈ ಸದಸ್ಯರಲ್ಲಿ ಯಾರಾದರೂ ಒಬ್ಬರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿರಬೇಕು.

**Application**

5 Application for membership shall be made in writing in the prescribed form and shall contain such particulars as may be prescribed by the Committee from time to time. Every such application shall be proposed by one current member, at least one of them shall be a member of Executive committee.

**ಪ್ರವೇಶ**

ಕಾರ್ಯಕಾರಿ ಸಮಿತಿಯು ಯಾವುದೇ ಅರ್ಜಿಯನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣವಿಲ್ಲದೇ ತಿರಸ್ಕರಿಸುವ ಅಥವಾ ಅರ್ಜಿಯನ್ನು ತಡೆಹಿಡಿಯುವ ಹಕ್ಕು ಪಡೆದಿದೆ. ಈ ವಿಷಯದಲ್ಲಿ ಸಮಿತಿಯ ತೀರ್ಮಾನವೇ ಅಂತಿಮವಾದುದು. ಅರ್ಜಿ ತಿರಸ್ಕೃತವಾದ ಸಂದರ್ಭಗಳಲ್ಲಿ ಪ್ರವೇಶ ಶುಲ್ಕ ಹಾಗೂ ಚಂದಾ ಹಣವನ್ನು ಹಿಂತಿರುಗಿಸಲಾಗುವುದು.

**Admission**

The committee may in their discreation either admit, withhold or reject any application for membership of the Chamber without assigning any reason and the decision of the Committee is final. In the event of rejection of an application, the subscription and Admission Fee remitted by the applicant in respect of such application shall be refunded to him.

**ಅಧಿಕೃತ ಪ್ರತಿನಿಧಿಯ ನಾಮಕರಣ**

ಯಾರಾದರೊಬ್ಬ ಸದಸ್ಯ ಬರವಣಿಗೆ ಮೂಲಕ ಅರ್ಜಿಗೆ ಸಹಿ ಮಾಡಿರುವ ಅರ್ಜಿದಾರರೊಬ್ಬರನ್ನು ಬಿಟ್ಟು ಒಬ್ಬರನ್ನು ತನ್ನ/ತಮ್ಮ ಅಧಿಕೃತ ಪ್ರತಿನಿಧಿಯಾಗಿ ನಾಮಕರಣ ಮಾಡಬಹುದು. (ಅವರು ಸದಸ್ಯತ್ವ ಹೊಂದಿರುವ ಸಂಸ್ಥೆಯ ಮುಖ್ಯಸ್ಥರಾಗಿರಬೇಕು ಅಥವಾ ಆ ಸಂಸ್ಥೆಯ ಜವಾಬ್ದಾರಿ ಹುದ್ದೆಯಲ್ಲಿರಬೇಕು) ಪ್ರತಿಯೊಂದು ಬಾರಿಯು ಸದಸ್ಯತ್ವದ ಹಕ್ಕು ಬಾಧ್ಯತೆಗಳನ್ನು ಚಲಾಯಿಸುವ ಸಂದರ್ಭಗಳಲ್ಲಿ ಮಂಡಳಿ ಈ ಪ್ರತಿನಿಧಿಯನ್ನು ಮಾತ್ರ ಗುರುತಿಸುವುದು. ಈ ಅಧಿಕೃತ ಪ್ರತಿನಿಧಿಯು ತೆಗೆದುಕೊಳ್ಳುವ ಎಲ್ಲ ನಿಲವು, ತೀರ್ಮಾನ, ಕೆಲಸಗಳಿಗೆ ಸದಸ್ಯತ್ವ ಹೊಂದಿರುವ ಸಂಸ್ಥೆ ಬದ್ಧವಾಗಿರತಕ್ಕದ್ದು.

**Nomination of Authorisied Representative**

6 Any member may propose in writing the name of one authorised representative other than the signatory to the application (who shall belong to the member firm or company or establishment or concern as the case may be and/or who hold a responsible office in the firm/company or establishment.) Provided that for the purpose of exercising the rights and privileges of membership, only that representative shall be recognised All decisions, acts and deeds by such nominated Representative shall be binding on the said Member.

**ಪಾವತಿ ಮಾಡಬೇಕಾದ ಚಂದಾ**

ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸುವಾಗ ಒಂದು ವರ್ಷದ ಹಣವನ್ನು ಕಾಲಕಾಲಕ್ಕೆ ಕಾರ್ಯಕಾರಿ ಸಮಿತಿಯು ನಿಗಧಿ ಪಡಿಸುವ ಪ್ರವೇಶ ಶುಲ್ಕದೊಂದಿಗೆ ಆಯಾಯ ವರ್ಗದ ಸದಸ್ಯತ್ವಕ್ಕೆ ಸಲ್ಲಿಸತಕ್ಕದು ಈ ಹಣ ಸಲ್ಲಿಸದೆ ಯಾವ ಅರ್ಜಿಯನ್ನೂ ಪರಿಗಣಿಸಲಾಗುವುದಿಲ್ಲ.

**Remittance of Subscription**

Every Application for Membership shall be accompanied by payment of one year's subscription fixed for that Category of membership together with the prescribed admission fee. No application for admission will be considered unless accompanied by such payment.

**ವಾರ್ಷಿಕ ಚಂದಾ**

ಪ್ರತಿ ವರ್ಷ ಕೊಡಬೇಕಾದ ಚಂದಾ ಹಣ ಪ್ರತಿ ವರ್ಷದ ಏಪ್ರಿಲ್ ಒಂದನೇ ತಾರೀಖಿಗೆ ಬಾಕಿಯಾಗುವುದು.

**Subscription**

8 The Annual Subscription for every calendar year shall be due and payable on 1st April of the year.

**ತೆಗೆದು ಹಾಕುವುದು/ಪುನಃ ಪ್ರವೇಶ**

ಯಾವುದೇ ಸದಸ್ಯರ ವಾರ್ಷಿಕ ಚಂದಾ ಹಣ ಮುಂದಿನ ವರ್ಷ ಮಾರ್ಚ 31ಕ್ಕೆ ಬಾಕಿ ಇದ್ದಲ್ಲಿ ಅವರು ಸದಸ್ಯತ್ವಕ್ಕೆ ಅನರ್ಹರಾಗಿರುತ್ತಾರೆ. ಅಂತಹ ಸದಸ್ಯರ ಹೆಸರನ್ನು ದಾಖಲಾತಿ ಪುಸ್ತಕದಿಂದ ತೆಗೆದುಹಾಕಲಾಗುವುದು. ಆ ಸದಸ್ಯರು ಪುನಃ ಪ್ರವೇಶ ಬಯಸಿದಲ್ಲಿ ವಾರ್ಷಿಕ ಚಂದಾ ಹಣದ ಪೂರ್ತಿ ಬಾಕಿಯ ಜೊತೆಗೆ ರೂ. 25/– ಗಳನ್ನು ಕೊಟ್ಟು ಪುನಃ ಪ್ರವೇಶ ಪಡೆದು ಸದಸ್ಯತ್ವವನ್ನು ಮುಂದುವರೆಸಬಹುದು.

**Removal, Re-Admission**

A member whose annual subscription is in arrears as on 31st March of the succeeding year shall cease to be a member and as such the name of the defaulter member be removed from the Register of Membership. On-re-admission such a member has to pay all the arrears of subscription from the time of removal to membership with fresh admission fee of Rs.25-